# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ


**ಡಾ॥ ಟಿ. ಬಿ. ಅಳ್ಳೊಳ್ಳಿ,** ಪಿ.ಹೆಚ್‌ಡಿ (ತೋಟಗಾರಿಕೆ)
ಕುಲಸಚಿವರು
ಮೊಬೈಲ್ ಸಂ. 94806 96389
ದೂರವಾಣಿ ಸಂ. 08354-230276/278/286/280

**ಕುಲಸಚಿವರ ಕಾರ್ಯಾಲಯ**
ಉದ್ಯಾನಗಿರಿ, ನವನಗರ
ಬಾಗಲಕೋಟ- 587104, ಕರ್ನಾಟಕ
ಮಿಂಚಂಚೆ:registrar@uhsbagalkot.edu.in


ಸಂಖ್ಯೆ: ಕುಸ/ಶೈಕ್ಷಣಿಕ/ 669 /2023-24

ದಿನಾಂಕ: 25.07.2023

## ಅಧಿಸೂಚನೆ

**ವಿಷಯ :** ಡಿಪ್ಲೋಮಾ(ತೋಟಗಾರಿಕೆ) ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳ-2020 ರಲ್ಲಿನ ನಿಯಮ ಸಂಖ್ಯೆ. 14 ನ್ನು ಮಾರ್ಪಡಿಸುವ ಕುರಿತು.

**ಉಲ್ಲೇಖ:**
1. ಈ ಕಛೇರಿ ಅಧಿಸೂಚನೆ ಸಂಖ್ಯೆ: ಕುಸ/ಶೈಕ್ಷಣಿಕ/ /2020-21 ದಿ:08.10.2020
2. ದಿನಾಂಕ: 24.06.2023 ರಂದು ನಡೆದ ವಿದ್ಯಾ ವಿಷಯಕ ಪರಿಷತ್ 36ನೇ ಸಭೆಯ ವಿಷಯ ಸೂಚಿ ಸಂಖ್ಯೆ.19ರ ಠರಾವು
3. ಡೀನ್ ಸ್ನಾತಕೋತ್ತರ, ತೋ.ವಿ.ವಿ, ಬಾಗಲಕೋಟ ಇವರ ಶಿಫಾರಸ್ಸು
4. ಶಿಕ್ಷಣ ನಿರ್ದೇಶಕರು, ತೋ.ವಿ.ವಿ, ಬಾಗಲಕೋಟ ಇವರ ಅನುಮೋದನೆ
5. ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟ ಇವರ ಆದೇಶ

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಿಪ್ಲೋಮಾ (ತೋಟಗಾರಿಕೆ) ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳು-2020 ರಲ್ಲಿನ ನಿಯಮ ಸಂಖ್ಯೆ 14 ನ್ನು ಈ ಕೆಳಗಿನಂತೆ ಮಾರ್ಪಡಿಸಿ ಅಧಿಸೂಚಿಸಲಾಗಿದೆ.

| ವಿವರ | ಪ್ರಸ್ತುತ | ಮಾರ್ಪಡಿಸಲಾಗಿರುವುದು |
|---|---|---|
| ನಿಯಮ ಸಂಖ್ಯೆ: 14 | **ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್ ಮುಗಿಸಲು ಕಾಲಾವಧಿ:**<br>ಒಮ್ಮೆ ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಯು ಈ ಕೋರ್ಸ್‌ಗೆ ನಿಗದಿಪಡಿಸಿದ ಅವಧಿಯ ನಂತರ, ಹೆಚ್ಚುವರಿಯಾಗಿ ಒಂದು ಶೈಕ್ಷಣಿಕ ವರ್ಷದಲ್ಲಿ 2 ಷಾಣ್ಮಾಸಿಕ (ಸೆಮಿಸ್ಟರ್) ಕೆಳಗಿನ ಕರಾರುಗಳಿಗೆ ಒಳಪಟ್ಟು ಈ ಕೋರ್ಸ್‌ನ್ನು ಉತ್ತೀರ್ಣರಾಗಿ ಮುಗಿಸಬೇಕು.<br>1. ಡಿಪ್ಲೋಮಾ(ತೋಟಗಾರಿಕೆ)ಕೋರ್ಸ್‌ನ ಶೇ.75 ರಷ್ಟು ಕೋರ್ಸ್ ಕ್ರೆಡಿಟ್ಸ್‌ಗಳನ್ನು ಮುಗಿಸಲು ಅವಕಾಶವಿದೆ.<br>2. ಈ ಕೋರ್ಸ್‌ನಲ್ಲಿ ಅಭ್ಯರ್ಥಿಯು ಓಜಿಪಿಎ 5.0 ಕ್ಕಿಂತ ಹೆಚ್ಚಾಗಿರಬೇಕು.<br>3. ಈ ಅವಧಿಯಲ್ಲಿ ವಿದ್ಯಾರ್ಥಿಯು ಕೋರ್ಸ್‌ನ್ನು ಮುಗಿಸದಿದ್ದಲ್ಲಿ ಅವರ ಪ್ರವೇಶವು ರದ್ದಾಗುವುದು<br>4. ಈ ಹೆಚ್ಚುವರಿ ಅವಧಿಗೆ ನಿಗದಿತ ಶುಲ್ಕವನ್ನು ವಿದ್ಯಾರ್ಥಿಯು ಭರಿಸಬೇಕಾಗುವುದು. | **ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್ ಮುಗಿಸಲು ಕಾಲಾವಧಿ:**<br>ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು, ಸಾಮಾನ್ಯ ನಿಗದಿಪಡಿಸಿದ ಎರಡು ವರ್ಷ ಅಥವಾ ನಾಲ್ಕು ಷಾಣ್ಮಾಸಿಕಗಳಲ್ಲಿ ಕೋರ್ಸ್‌ನ್ನು ಮುಗಿಸದಿದ್ದರೆ, ಈ ಕೆಳಗಿನ ಕರಾರುಗಳಿಗೆ ಒಳಪಟ್ಟಿದ್ದಲ್ಲಿ ಈ ಕೋರ್ಸ್‌ನ್ನು ಹೆಚ್ಚುವರಿಯಾದ ಗರಿಷ್ಠ ಎರಡು ಶೈಕ್ಷಣಿಕ ವರ್ಷ ಅಥವಾ ನಾಲ್ಕು ಷಾಣ್ಮಾಸಿಕಗಳಲ್ಲಿ ಉತ್ತೀರ್ಣರಾಗಲು ಅವಕಾಶವಿರುತ್ತದೆ. ಇಲ್ಲದಿದ್ದರೆ ಅಂತಹ ವಿದ್ಯಾರ್ಥಿಗಳ ಪ್ರವೇಶವು ರದ್ದಾಗುವುದು.<br>1. ಪ್ರವೇಶ ಪಡೆದ ಮೊದಲ ಎರಡು ವರ್ಷಗಳ ಅಂತ್ಯಕ್ಕೆ ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ನಿಗದಿಪಡಿಸಿದ ಒಟ್ಟಾರೆ ಕೋರ್ಸ್ ಕ್ರೆಡಿಟ್‌ನ ಶೇ.75 ರಷ್ಟು ಕೋರ್ಸ್ ಕ್ರೆಡಿಟ್ಸ್‌ಗಳನ್ನು ಮುಗಿಸಿರಬೇಕು ಹಾಗೂ ಈ ಕೋರ್ಸ್‌ನಲ್ಲಿ ಅಭ್ಯರ್ಥಿಯ ಸಿಜಿಪಿಎ (CGPA) 5.00 ಅಥವಾ 5.00 ಕ್ಕಿಂತ ಹೆಚ್ಚಾಗಿರಬೇಕು, ಇಲ್ಲದಿದ್ದರೆ ಅಂತಹ ವಿದ್ಯಾರ್ಥಿಗಳ ಪ್ರವೇಶವು ರದ್ದಾಗುವುದು.<br>2. ಹೆಚ್ಚುವರಿ ಅವಧಿಗೆ (3 ಹಾಗೂ 4ನೇ ಶೈಕ್ಷಣಿಕ ವರ್ಷ) ನಿಗದಿತ ಶುಲ್ಕವನ್ನು ವಿದ್ಯಾರ್ಥಿಯು ಭರಿಸಬೇಕಾಗುವುದು. |

ಮೇಲ್ಕಂಡ ಮಾರ್ಪಾಡುಗಳು, ಈ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು,
ತೋ.ವಿ.ವಿ.ಬಾಗಲಕೋಟ

**ಪ್ರತಿಯನ್ನು ಆದರಪೂರ್ವಕವಾಗಿ:**
1. ಎಲ್ಲ ಅಧಿಕಾರಿಗಳು, ತೋ.ವಿ.ವಿ., ಬಾಗಲಕೋಟ
2. ವಿದ್ಯಾ ವಿಷಯಕ ಪರಿಷತ್ತಿನ ಎಲ್ಲ ಸದಸ್ಯರಿಗೆ
3. ಡೀನ್ (ಸ್ನಾತಕೋತ್ತರ), ತೋವಿವಿ. ಬಾಗಲಕೋಟ
4. ಮುಖ್ಯಸ್ಥರು, ತೋ.ಸಂ.ವಿ.ಕೇ. ಹೊಗಳಗೆರೆ
5. ಸಂಯೋಜಕರು, ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ, ತೋ.ಸಂ.ವಿ.ಕೇ. ಹೊಗಳಗೆರೆ/ ಕಿ.ರಾ.ಚ.ತೋ.ಮ.ವಿ. ಅರಭಾವಿ

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಲಾಗಿದೆ :** ಶಿಕ್ಷಣ ನಿರ್ದೇಶಕರು, ತೋವಿವಿ. ಬಾಗಲಕೋಟ.

**ಪ್ರತಿ:** ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋವಿವಿ. ಬಾಗಲಕೋಟ